## ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.

## CC No.115/2019

**PW-3 CW-5**

| | | |
|---|---|---|
| ಸಾಕ್ಷಿದಾರನ ಹೆಸರು | : | ಸಾಬಯ್ಯ ತಂದೆ ರಾಯಗೌಡ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಲಿಂಗದಹಳ್ಳಿ |
| ಪ್ರಮಾಣೀಕರಿಸಿದ ದಿನಾಂಕ | : | 29-09-2023 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನನಗೆ ಆರೋಪಿತರ ಪರಿಚಯ ಇದೆ. ನನಗೆ ಚಾಸಾ-1 ರಿಂದ 4, 6 ರಿಂದ 10 ರವರ ಪರಿಚಯವಿದೆ. ಸುಮಾರು 04 ವರ್ಷಗಳ ಹಿಂದೆ ಚಾಸಾ-1 ಹಾಗೂ 4 ರವರು ಹೊಲದಲ್ಲಿ ಕೆಲಸ ಮಾಡಲು ಹೋದಾಗ ಆರೋಪಿತರು ತಮ್ಮ ಹೊಲದಲ್ಲಿ ಏಕೆ ಕೆಲಸ ಮಾಡುತ್ತಿರಿ ಎಂದು 1 ನೇ ಆರೋಪಿ ಕಟ್ಟಿಗೆಯಿಂದ ಚಾಸಾ-1 ರವರಿಗೆ ಹೊಡೆದಿರುತ್ತಾರೆ. 2 ನೇ ಆರೋಪಿ ಚಾಸಾ-1 ರವರಿಗೆ ಚಪ್ಪಲಿಯಿಂದ ಹೊಡೆದಿರುತ್ತಾರೆ. 3 ನೇ ಆರೋಪಿ 2 ನೇ ಆರೋಪಿಗೆ ಚಾಸಾ-1 ರವರನ್ನು ಹೊಡೆಯಬೇಕು ಎಂದು ಪ್ರೇರೆಪಿಸಿರುತ್ತಾರೆ. 4 ನೇ ಆರೋಪಿ ಚಾಸಾ-1 ರವರಿಗೆ ಖಲಾಸ್ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಮುದ್ದೆಮಾಲು-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರ ಶ್ರೀ ಎ.ಎಮ್.ಪಿ ವಕೀಲರಿಂದ.**

ಚಾಸಾ-1 ನನಗೆ ಬೀಗರಾಗಬೇಕು. ಚಾಸಾ-1 ನನಗೆ ಅಳಿಯನಾಗಬೇಕು. ಜಿಪಿಎಸ್ ಕೆಲಸವನ್ನು ಚಂದ್ರಾಮ ರವರ ಜಮೀನಿನಲ್ಲಿ ಮಾಡುತ್ತಿದ್ದರು. ಲಿಂಗದಹಳ್ಳಿಯಲ್ಲಿ ಉದ್ಯೋಗಖಾತ್ರಿ ಕೂಲಿಕಾರರ ಹಣವನ್ನು ಅಕ್ರಮವಾಗಿ ಚಾಸಾ-1 ರವರು ಪಡೆಯುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ 1 ನೇ ಆರೋಪಿಯ ಅಣ್ಣನ ಹೆಂಡತಿಯವರು ನಮಗೆ ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಹಾಗೂ ಚಾಸಾ-1 ರವರು ಆರೋಪಿತರಿಗೆ ಹೊಡೆದಿರುತ್ತೇವೆ ಆದಕಾರಣ ಅವರು ನಮ್ಮಗಳ ವಿರುದ್ಧ ಸಿಸಿ ನಂಬರ 135/2019 ನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆದಕಾರಣ ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಈಗ ಜೀವಂತ ಇರುವುದಿಲ್ಲ. 2 ನೇ ಆರೋಪಿ ಚಪ್ಪಲಿಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಗೆ 3 ನೇ ಆರೋಪಿ ಚಾಸಾ-1 ರವರನ್ನು ಹೊಡೆಯಬೇಕು ಎಂದು ಹೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ-1 ರವರನ್ನು ಖಲಾಸ್

ಮಾಡಬೇಕೆಂದು ಹೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೆಯನ್ನು ಪೊಲೀಸ ಠಾಣೆಯಲ್ಲಿ ಕೊಟ್ಟಿರುತ್ತೇನೆ. ನಾನು ಪೊಲೀಸ ಠಾಣೆಗೆ 04 ವರ್ಷಗಳ ಹಿಂದೆ ಹೋಗಿದ್ದೆ. ಯಾವ ತಾರೀಖು ನಾನು ಪೊಲೀಸ ಠಾಣೆಗೆಹೋಗಿದ್ದೆ ಗೊತ್ತಾಗುವುದಿಲ್ಲ. ಈ ಪ್ರಕರಣದ ಜಗಳ ಚಂದ್ರಾಮ ರವರ ಜಮೀನಿನಲ್ಲಿ ಆಗಿರುತ್ತದೆ. ಆಗ ನಾನು ಹೊಲದಲ್ಲಿದ್ದೆ. ನಮ್ಮ ಜಮೀನುಗಳು ಸಹ ಚಂದ್ರಾಮ ರವರ ಜಮೀನಿನ ಹತ್ತಿರ ಬರುತ್ತವೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದ ಚೆಕ್ಕಂದಿ ಗೊತ್ತಿಲ್ಲ. ಯಾವುದೇ ಘಟನೆ ಆಗದಿದ್ದರೂ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ವಿಷಯ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.